

# ಏಕಶಿಲೆಯಲ್ಲಿ ಅರಳಿದ ಕಲೆ

ಈ ಶಿಲ್ಪಗಳು ಆಕಸ್ಮಿಕ ಕೆತ್ತನೆಗಳಲ್ಲ. ಪ್ರತಿಯೊಂದೂ ಸಕಾರಣ ಚಿತ್ರಗಳಾಗಿದ್ದು, ಅರ್ಥಗರ್ಭಿತವಾಗಿವೆ. ದೇವಾಲಯದ ಪ್ರಾಂಗಣದಲ್ಲಿ ಕಂಡುಬರುವ ಎರಡು ಬೃಹತ್ ಆನೆಗಳು ಹಾಗೂ ವಿಜಯದ ಸಂಕೇತವಾದ ಕಂಬಗಳು, ರಾಷ್ಟ್ರಕೂಟರ ಆಳ್ವಿಕೆಯ ಪರ್ವಕಾಲ ಹಾಗೂ ಅಧಿಕಾರದ ವೈಭವವನ್ನು ಎತ್ತಿ ತೋರಿಸುತ್ತವೆ.

■ ಕೆ. ವೆಂಕಟೇಶ



ಎಲ್ಲೋರದ ಕೈಲಾಶ್ ಅನ್ನುವುದು ಪರಿಪೂರ್ಣವಾಗಿ ಏಕಶಿಲೆಯನ್ನು ಬಗೆದು ನಿರ್ಮಿಸಿರುವ ಸುಂದರವಾದ ದೇವಾಲಯ ಸಂಕೀರ್ಣ. ಸಾಲಾಗಿ ಹಬ್ಬಿರುವ ಶಿಲಾ ಪದರದ ಸಮೂಹದಲ್ಲಿ ವಿಶಿಷ್ಟವಾಗಿ ಬಂಡೆಯನ್ನು ಮೇಲ್ಭಾಗದಿಂದ ತಳದವರೆಗೆ; ಹೊರಗಡೆ ಮತ್ತು ಒಳಗಡೆ ಕಡೆದು ರೂಪಿಸಿರುವ ದೇವಾಲಯ ಸಂಕೀರ್ಣವಿದು. ಇತಿಹಾಸದ ಪ್ರಕಾರ ಈ ದೇವಾಲಯ ನಿರ್ಮಿಸಲು ಸುಮಾರು 200 ವರ್ಷಗಳ ಕಾಲ ಹಿಡಿಯಿತಂತೆ. ರಾಷ್ಟ್ರಕೂಟರ ರಾಜ ದಂತಿದುರ್ಗ (ಕ್ರಿ.ಶ. 735–757) ಈ ದೇವಾಲಯಗಳನ್ನು ನಿರ್ಮಿಸಲು ಸಂಕಲ್ಪ ಮಾಡಿದನು. ನಂತರ ಒಂದನೇ ಕೃಷ್ಣನ ಕಾಲದಲ್ಲಿ ಈ ಸಂಕೀರ್ಣ ಕಲಾತ್ಮಕತೆಯ ಉನ್ನತವಾಸ್ಥೆಯನ್ನು ತಲುಪಿತು.

ಒಂದಕ್ಕೊಂದು ತಾಗಿದಂತೆ ಸಾಲಾಗಿ ಹೆಣೆದು ನಿಂತಿರುವ ಬೌದ್ಧಮತದ ಹದಿನೈದು ಗುಹಾಂತರ ದೇವಾಲಯಗಳ ನಂತರ, ಹದಿನಾರನೆಯದಾಗಿ ಕೈಲಾಶ್‌ನಾಥ್ ಅರಳಿ ನಿಂತಿದೆ. ಎರಡು ಲಕ್ಷ ಟನ್‌ಗಳಷ್ಟು ಕಲ್ಲನ್ನು ವಿಶಿಷ್ಟವಾದ ಉಳಿಗಳಿಂದ ಕೆತ್ತಿ ಹೊರಹಾಕಲಾಗಿದೆ. ಇಲ್ಲಿ ಮುಖ್ಯ ದೇವಳ ಶಿವಲಿಂಗದ್ದು. ಹೊರಗಡೆ ನಿರ್ಮಿಸಿರುವ ದೇವಾಲಯಗಳಲ್ಲಿ ಮುಖ್ಯ ದ್ವಾರ, ನಂದಿ, ದ್ವಾರಪಾಲಕರು ಎಲ್ಲವೂ ಇದೆ. ಗೋಡೆಗಳಲ್ಲಿ ವಿಗ್ರಹಗಳ ಕೆತ್ತನೆ, ಕಂಬಗಳ ಕೆತ್ತನೆ, ಕಿಟಕಿಗಳು, ಮೇಲ್ಛಾವಣಿಯ ಕೆತ್ತನೆಗಳು ಸುಂದರವಾಗಿವೆ. ಇತರ ದೇವತೆಗಳ ಬೃಹದಾಕಾರವಾದ ಶಿಲ್ಪಗಳು, ಪುರಾಣ ಕಥೆಗಳ, ಮಹಾಕಾವ್ಯಗಳ ದೃಶ್ಯಾವಳಿಗಳು ಹಾಗೂ ರೇಖಾ ಗಣಿತದಲ್ಲಿನ ಆಕೃತಿಗಳು, ಅದ್ಭುತ ದೃಶ್ಯ ಕಾವ್ಯವಾಗಿ ಇಲ್ಲಿ ಮೂಡಿವೆ.

ಈ ಶಿಲ್ಪಗಳು ಆಕಸ್ಮಿಕ ಕೆತ್ತನೆಗಳಲ್ಲ. ಪ್ರತಿಯೊಂದೂ ಸಕಾರಣ ಚಿತ್ರಗಳಾಗಿದ್ದು, ಅರ್ಥಗರ್ಭಿತವಾಗಿವೆ. ಪ್ರಾಂಗಣದಲ್ಲಿ ಕಂಡುಬರುವ ಎರಡು ಬೃಹತ್ ಆನೆಗಳು ಹಾಗೂ ವಿಜಯದ ಸಂಕೇತವಾದ ಕಂಬಗಳು ರಾಷ್ಟ್ರಕೂಟರ ಆಳ್ವಿಕೆಯ ಪರ್ವಕಾಲ ಹಾಗೂ ಅಧಿಕಾರದ ವೈಭವವನ್ನು ತೋರಿಸುತ್ತವೆ. ಅಂಗಳದಲ್ಲಿ ಕಂಡು ಬರುವ ಶಂಖನಿಧಿ, ಪದ್ಮನಿಧಿ ಮತ್ತು ಗಜಲಕ್ಷ್ಮಿಯ ಚಿತ್ರಣ ರಾಷ್ಟ್ರಕೂಟರ ಉನ್ನತಿಯ ಸಂಕೇತವಾಗಿದೆ.

ಗಂಗಾ, ಯಮುನಾ, ಸರಸ್ವತಿ ಚಿತ್ರಗಳು ಪರಿಶುದ್ಧತೆ, ನಿವೇದನೆ ಮತ್ತು ವಿದ್ಯೆಯ ಲಾಂಛನವಾಗಿ ಕಂಗೊಳಿಸುತ್ತಿವೆ. ದೇವಾಲಯದ ಪ್ರಾಕಾರದಲ್ಲಿ ವಿವಿಧ ರೀತಿಯ ಪ್ರಾಣಿ ಸಂಕುಲದ ಕೆತ್ತನೆ, ಹಿಂದೂ ಪುರಾಣ ಕಥೆಗಳಲ್ಲಿ ಪ್ರಾಣಿ ಸಂಕುಲಕ್ಕೆ ಕೊಟ್ಟಿರುವ ಪ್ರಾಶಸ್ತ್ಯವನ್ನು ಎತ್ತಿ ತೋರಿಸುತ್ತದೆ. ದೇವಾಲಯದ ಸುತ್ತ ಎತ್ತರದಲ್ಲಿ ಕಂಬಗಳಿಂದ ಕೂಡಿದ ಮೊಗಸಾಲೆಯಲ್ಲಿ ಬೃಹದಾಕಾರದ ಸಾಲು ಸಾಲಾದ ಪುರಾಣ ಕಥೆ ಹೇಳುವ ಕೆತ್ತನೆಗಳು ಕಂಡುಬರುತ್ತದೆ.

ಮುಖ್ಯ ದೇವಾಲಯವನ್ನು 'ರಂಗ್ ಮಹಲ್' ಎಂದು ಕರೆಯುತ್ತಾರೆ. ದೇವಾಲಯದ ಕೆತ್ತನೆ ಕೆಲಸ ಮುಗಿದ ನಂತರ ಗಾರೆ ಗಿಲಾವು ಮಾಡಿಸಿ ವರ್ಣಚಿತ್ರ ರಚಿಸಿರುವುದರಿಂದ ರಂಗ್ ಮಹಲ್ ಎಂಬ ಹೆಸರು ಬಂದಿದೆ. ಸಮತಟ್ಟಿನ ಮೇಲೆ

(8ನೇ ಪುಟ ನೋಡಿ)